(ಬ) ರಾಜ್ಯದಲ್ಲಿ ಯಾವ ಯಾವ ಕಾಲದಲ್ಲಿ ಯಾವ್ಯಾವ ಕಾರ್ಖಾನೆಗಳು ಕಬ್ಬನ್ನು ಅರೆಯುತ್ತಿವೆ ಎನ್ನುವ ಮಾಹಿತಿಯನ್ನು ಕೊಡಲು ಹೈ ಪವರ್ ಕಮಿಟಿಯನ್ನು ರಚನೆ ಮಾಡಿರುವ ಬಗ್ಗೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಸಭಾಧ್ಯಕ್ಷರೆ, ಒಂದು ಸರ್ಕಾರವೆಂದರೆ, ಯಾವ್ಯಾವ ಕಾಲದಲ್ಲಿ, ಯಾವ್ಯಾವ ಕಾರ್ಖಾನೆ ಕಬ್ಬನ್ನು ಅರೆಯುತ್ತವೆನ್ನುವ ಮಾಹಿತಿಯನ್ನು ಕೊಡಬೇಕು. ಈ ಹೈಪವರ್ ಕಮಿಟಿ ಸಭೆಯನ್ನು ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಕರೆದು, ಆ ಕಾರ್ಖಾನೆಗಳ ಪರಿಸ್ಥಿತಿ ಏನು? ಹೆಚ್ಚುವರಿ ಕಬ್ಬನ್ನು ಯಾವ್ಯಾವ ರೀತಿ ಡೈವರ್ಷನ್ ಮಾಡಬೇಕು? ಹೇಗೆ ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಿದ್ದದ್ದು ಪ್ರತಿವರ್ಷ ನಡೆಯುತ್ತಿದ್ದಂಥ ಪದ್ಧತಿ. ಮಾನ್ಯ ಶಿವಪ್ಪನವರು ಬಹಳ ಅನುಭವಿರತಕ್ಕಂಥವರು, ಆ ವಿಚಾರದಲ್ಲಿ ಅರಿವಿರತಕ್ಕಂಥವರು; ಆದರೆ ಅವರು ಒಂದು ಸಭೆಯನ್ನೂ ಕರೆಯಲಿಲ್ಲ, ಏನೂ ಮಾಡಲಿಲ್ಲ. ಈಗಾಗಲೇ ಮಂಡ್ಯ ಕಾರ್ಖಾನೆ, ಚಾಮುಂಡೇಶ್ವರಿ ಕಾರ್ಖಾನೆ, ಬನ್ನೇರಿಯಮ್ಮ ಕಾರ್ಖಾನೆಗಳೆಲ್ಲಾ ಸಕ್ಕರೆಯನ್ನು ಅರೆಯುವ ಕೆಲಸವನ್ನು ಆರಂಭ ಮಾಡಿವೆ; ಅದಕ್ಕೆ ಯಾವುದೇ ನಿಗದಿತ ಬೆಲೆ ಇಲ್ಲ, ಯಾವುದೇ ಆಲೋಚನೆ ಇಲ್ಲದ ಪರಿಸ್ಥಿತಿ ಇದೆ; ಮಾನ್ಯ ಶಿವಪ್ಪನವರು ಅಪರೂಪಕ್ಕೆ ಸಿಗುತ್ತಿದ್ದಾರೆ, ವಿಚಾರ ಏನು ಎಂದು ಗೊತ್ತಿಲ್ಲ. ಅವರು ಸಕ್ಕರೆ ಸಚಿವರಾಗುವುದಕ್ಕಿಂತ ಮುಂಚೆ ಹಿಂದೆ ಕುಳಿತುಕೊಂಡು ಎಲ್ಲದಕ್ಕೂ ಪಾಯಿಂಟ್ ಅಪ್ ಆರ್ಡರ್ ಎಂದು ಹೇಳುತ್ತಿದ್ದರು; ಈಗ ಆ ಪಾಯಿಂಟು ಇಲ್ಲ, ಆರ್ಡರು ಇಲ್ಲ, ಏನು ವಿಚಾರ ಎನ್ನುವುದು ಗೊತ್ತಾಗುತ್ತಿಲ್ಲ. ಈಗಾಗಲೇ ರೈತರು ಬೀದಿಗಿಳಿದು ಚಳುವಳಿ ಮಾಡುವ ಪರಿಸ್ಥಿತಿ ಇದೆ; ಈಗಾಗಲೇ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ 865 ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್. ಶಿವಪ್ಪ (ಮಾನ್ಯ ಸಕ್ಕರೆ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ವರ್ಷ ವರ್ಷ ಕಬ್ಬಿನ ಬೆಲೆಯನ್ನು ನಿಗದಿ ಮಾಡುವುದಕ್ಕೆ ಸಂಬಂಧಿಸಿದಂತೆ ಮೊದಲು ಕೇಂದ್ರ ಸರ್ಕಾರ ಸ್ಟ್ಯಾಚುಟರಿ ಮಿನಿಮಂ ಪ್ರೈಸ್ ಎಂದು ನಿಗದಿ ಮಾಡುತ್ತದೆ, ನಂತರ ರಾಜ್ಯ ಸರ್ಕಾರದವರು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕಾರ್ಖಾನೆಗಳ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರನ್ನೆಲ್ಲಾ ಒಂದು ಸಭೆಗೆ ಕರೆದು ಚರ್ಚೆ ಮಾಡಿ ಒಂದು ಅಡ್ವೈಸರಿ ಪ್ರೈಸ್ ಎಂದು ನಿಗದಿ ಮಾಡುತ್ತೇವೆ. ಆದರೆ ಈ ಬಗ್ಗೆ ಇದುವರೆಗೆ ಕೇಂದ್ರ ಸರ್ಕಾರ ಕನಿಷ್ಟ ಬೆಲೆಯನ್ನು ನಿಗದಿ ಮಾಡಿಲ್ಲ. ಈ ಮಧ್ಯೆ ಖಾಸಗಿ ಕಾರ್ಖಾನೆಯವರು ಈ ಹೈಪವರ್ ಕಮಿಟಿಗೆ ಅಡ್ವೈಸರಿ ಪ್ರೈಸ್ ಅನ್ನು ನಿಗದಿ ಮಾಡುವ ಅಧಿಕಾರವಿಲ್ಲವೆಂದು ಹೇಳಿ ಹೈಕೋರ್ಟಿನಲ್ಲಿ ಈ ಬಗ್ಗೆ ಒಂದು ತಡೆಯಾಜ್ಞೆಯನ್ನು ತಂದಿದ್ದಾರೆ. ಈಗ ಈ ಹೈಪವರ್ ಕಮಿಟಿಗೆ ಅಡ್ವೈಸರಿ ಪ್ರೈಸ್ ನಿಗದಿ ಮಾಡುವ ಅಧಿಕಾರವಿಲ್ಲವೆಂದು ಯಾವುದೇ ಕಾರ್ಖಾನೆಯವರು ತಡೆಯಾಜ್ಞೆಯನ್ನು ತಂದರು ಕೂಡ ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ

ಆದು ಅನ್ವಯಿಸುತ್ತದೆ. ಈ ಮಧ್ಯೆ ಈಗಾಗಲೇ ನಾನು ಅಧಿಕಾರಿಗಳ ಸಭೆಯನ್ನು ಕರೆದು, ರಾಜ್ಯದ ರೈತರ ಹಿತದೃಷ್ಟಿಯಿಂದ ಮತ್ತು ಕಾರ್ಖಾನೆಗಳವರ ಹಿತದೃಷ್ಟಿಯಿಂದ ನಾವು ಒಂದು ಸೂಚನೆ ಕೊಡಬೇಕು ಎಂದು ತಿಳಿದುಕೊಂಡು, 1998-99ನೇ ಸಾಲಿನಲ್ಲಿ ಕಬ್ಬಿಗೆ ಏನು ಬೆಲೆಯನ್ನು ಕೊಟ್ಟಿದ್ದೆವು, ಆ ಬೆಲೆಯನ್ನು ಮುಂದುವರೆಸಬೇಕು ಎಂದು ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಸ್ಟಾಚುಟರಿ ಮಿನಿಮಂ ಪ್ರೈಸನ್ನು ನಿಗದಿ ಮಾಡಿದ ನಂತರ ನಾವು ಅನಧಿಕೃತವಾಗಿ ಒಂದು ಸಭೆಯನ್ನು ಕರೆದು ಆ ಒಂದು ಬೆಲೆಯ ಬಗ್ಗೆ ಸೂಚನೆ ಕೊಡಬೇಕು ಎನ್ನು ದೃಷ್ಟಿಯಿಂದ ಮಾಡಿದ್ದೇವೆ. ಏಕೆಂದರೆ, ಕರ್ನಾಟಕದ ದಕ್ಷಿಣ ಭಾಗದ ಎಲ್ಲಾ ಕಾರ್ಖಾನೆಗಳು ಜುಲೈನಲ್ಲಿ ಕೆಲಸ ಪ್ರಾರಂಭ ಮಾಡುತ್ತವೆ. ಆದ್ದರಿಂದ ಈಗಾಗಲೇ ನಾವು ಸೂಚನೆ ಕೊಟ್ಟಿದ್ದೇವೆ, 1998-99ನೇ ಸಾಲಿನಲ್ಲಿ ಕಾರ್ಖಾನೆಗಳು ಕೊಟ್ಟಿದ್ದಂಥ ಬೆಲೆಯನ್ನು ಮುಂದುವರೆಸಿಕೊಂಡು ಹೋಗಬೇಕು, ನಂತರ ಲಾಭ ನಷ್ಟಗಳನ್ನು ನೋಡಿಕೊಂಡು, ಆಮೇಲೆ ಹೈ ಪವರ್ ಕಮಿಟಿಯ ಸಭೆಯನ್ನು ಅನಧಿಕೃತವಾಗಿ ಕರೆದು ಒಂದು ನಿಗಧಿತ ಬೆಲೆಯನ್ನು ತಿಳಿಸುತ್ತೇವೆ ಎಂದು ಈಗಾಗಲೇ ಅಧಿಕಾರಿಗಳಿಗೆ ಸೂಚನೆ ಕೊಡಲು ನಾನು ತಿಳಿಸಿದ್ದೇನೆ.

ಶ್ರೀ ಕೆ. ಪುಟ್ಟಣ್ಣಯ್ಯ :— ಈ ಬಗ್ಗೆ ನೇರವಾಗಿ ತಾವು ಉತ್ತರ ಕೊಡಿ. ಆಮೇಲೆ ಸಕ್ಕರೆ ಮೇಲೆ ತಾವು ಮಾತನಾಡಿ. ಇಡೀ ಕಾರ್ಖಾನೆಗಳ ಮೇಲೆ ಮಾತನಾಡುವಾಗ ಆ ಬಗ್ಗೆ ಪೂರ್ಣ ವಿಚಾರವನ್ನು ತಾವು ಹೇಳಬಹುದು. ಈಗ ಬಹಳ ಮುಖ್ಯವಾಗಿರುವ ಪ್ರಶ್ನೆಯೆಂದರೆ, ಎರಡು ಕಾರ್ಖಾನೆಗಳು ಶುರುವಾಗುತ್ತವೆ, ರೈತರು ಬೀದಿಗಿಳಿದಿದ್ದಾರೆ. ಬೆಲೆಯ ಬಗ್ಗೆ ಸರ್ಕಾರದ ನಿಲುವು ಏನು ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಹೆಚ್. ಶಿವಪ್ಪ :— ಇನ್ನು ಒಂದು ವಾರದಲ್ಲಿ ನಾವು ಸಭೆಯನ್ನು ಕರೆಯುತ್ತೇವೆ. ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಂಡಿದ್ದೇನೆ. ಅವರಿಗೆ ಆರೋಗ್ಯ ಸರಿ ಇಲ್ಲ. ಮತ್ತು ಮಾನ್ಯ ನಾಗೇಗೌಡರ ಹತ್ತಿರವೂ ಈ ವಿಚಾರದಲ್ಲಿ ನಾನು ಚರ್ಚೆ ಮಾಡಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ನಾಗೇಗೌಡರು ಮತ್ತು ನೀವು ಇಬ್ಬರೂ ಕುಳಿತು ಸಂಪೂರ್ಣ ಚರ್ಚೆ ಮಾಡಿ. ಮುಂದೆ ಹೇಗೆ ಮಾಡಬೇಕು. ಏನು ಮಾಡಬೇಕು ಎನ್ನುವುದು ನಿಮಗೆ ಬಿಟ್ಟ ವಿಷಯ. ಅವರು ಕೇಳಿದ್ದು ಎರಡು ವಿಷಯಗಳನ್ನು ಮಾತ್ರ. ಎರಡು ಕಾರ್ಖಾನೆಗಳ ಬಗ್ಗೆ ಬೆಲೆ ಏರಿಸತಕ್ಕಂಥಾದ್ದರ ಬಗ್ಗೆ ನಿಮ್ಮ ನಿಲುವು ಏನು ರೈತರು ಬೀದಿಗೆ ಬಂದಿದ್ದಾರೆ ಎಂದು ಕೇಳಿದ್ದಾರೆ. ಅಷ್ಟಕ್ಕೆ ಸೀಮಿತವಾದಂಥ ಉತ್ತರ ಕೊಡಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಹೆಚ್. ಶಿವಪ್ಪ :— ನಾನು ಆಗಲೇ ಹೇಳಿದೆ, ಮಾನ್ಯ ವಿರೋಧ ಪಕ್ಷದ

ನಾಯಕರು ಕೇಳಿದರೋ, ಇಲ್ಲವೋ ಗೊತ್ತಾಗಲಿಲ್ಲ. 1998-99ನೇ ಸಾಲಿಗೆ ಕೊಟ್ಟಂಥ ಬೆಲೆಯನ್ನೇ ಮುಂದುವರೆಸಿಕೊಂಡು ಹೋಗಬೇಕು ಎಂದು ನಾವು ಈಗಾಗಲೇ ಹೇಳಿದ್ದೇವೆ. ಮತ್ತು ನಂತರ ಅಂತಿಮವಾಗಿ ಒಂದು ಬೆಲೆಯನ್ನು ನಿಗದಿ ಮಾಡುತ್ತೇವೆ ಎಂದು ಈಗಾಗಲೇ ಹೇಳಿದ್ದೇನೆ. ಮಂಡ್ಯ ಸಕ್ಕರೆ ಕಾರ್ಖಾನೆಯವರು 865 ರೂಪಾಯಿಗಳಿಗೆ ಕೊಟ್ಟಿದ್ದಾರೆ ಎನ್ನುವುದು ಇಲ್ಲ; ಹಿಂದೆ ಕೊಟ್ಟಿದ್ದಂಥ 850 ರೂಪಾಯಿಗಳು 825 ರೂಪಾಯಿಗಳು ಅದು ಬೋನಸ್ ಕೊಟ್ಟಿದ್ದಾರೆ ಬೇರೆಯವರು ಸಹ ಕೊಟ್ಟಿದ್ದಾರೆ. ಅದು ಲೆಕ್ಕಕ್ಕೆ ಬರುವುದಿಲ್ಲ.

ಶ್ರೀ ಕೆ. ಪುಟ್ಟಣ್ಣಯ್ಯ :— ಬೋನಸ್ ಎಂದರೆ ಏನು?

ಶ್ರೀ ಹೆಚ್. ಶಿವಪ್ಪ :— ಅದು ಈಗ ಬೇಡ. ಈ ಡಿಮ್ಯಾಂಡ್ ಮೇಲೆ ಮಾತನಾಡುವಾಗ ನಾನು ಹೇಳುತ್ತೇನೆ.

ಶ್ರೀ ಕೆ. ಪುಟ್ಟಣ್ಣಯ್ಯ :— ಅವರು ಮೀಟಿಂಗ್ ಕರೆಯುತ್ತೇವೆ ಎಂದು ಹೇಳಿದ್ದಾರೆ. ತಕ್ಷಣದಲ್ಲಿ ಒಂದು ಮೀಟಿಂಗ್ ಕರೆದು ತೀರ್ಮಾನ ಮಾಡಲಿ. ಸಂಬಂಧಪಟ್ಟ ಉಸ್ತುವಾರಿ ಮಾನ್ಯ ಸಚಿವರೂ ಇಲ್ಲಿ ಇದ್ದಾರೆ. ಚಾಮುಂಡೇಶ್ವರಿ ಮತ್ತು ಮಂಡ್ಯ ಸಕ್ಕರೆ ಕಾರ್ಖಾನೆಗಳ ಮಾಜಿ ಛೇರ್ಮನ್ ಆಗಿದ್ದಂಥವರು ತಾವು. ಆದ್ದರಿಂದ, ಇಷ್ಟು ಕಾಲ ಏಕೆ ವಿಳಂಬವಾಗುತ್ತಿದೆ? ಇದಕ್ಕೆ ನೀವೇ ಜವಾಬ್ದಾರರು. ಅದರ ಬಗ್ಗೆ ನೀವೂ ಒಂದು ಮಾತು ಹೇಳಬೇಕು.

ಶ್ರೀ ಕೆ.ಎನ್. ನಾಗೇಗೌಡ :— ಒಂದು ವಾರದಲ್ಲಿ ಮೀಟಿಂಗ್ ಕರೆಯುತ್ತೇವೆ ಎಂದು ಮಾನ್ಯ ಶಿವಪ್ಪನವರು ಈಗಾಗಲೇ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ಸ್ಟಾಚುಟರಿ ಮಿನಿಮಂ ಪ್ರೈಸ್ ಫಿಕ್ಸ್ ಮಾಡಿರುವುದು ಹೋದವರ್ಷ ಎಂದು ಹೇಳಿದ್ದಾರೆ. ಹೋದವರ್ಷ ಕೊಟ್ಟಂಥ ಕನಿಷ್ಟ ಬೆಲೆಯನ್ನು ಈ ಸಾಲಿಗೂ ಕೊಡಬೇಕು ಎಂದು ನಾವು ಹೇಳಿದ್ದೇವೆ. ಅದರ ಮೇಲೆ ಯಾರು ಎಷ್ಟು ಬೇಕಾದರೂ ಕೊಡಬಹುದು. ಮೈಸೂರು ಶುಗರ್ ಕಂಪನಿ 880 ರೂಪಾಯಿಗಳಿಗೆ ಚಾಮುಂಡೇಶ್ವರಿ ಕಾರ್ಖಾನೆ 880 ರರೂಪಾಯಿಗಳಿಗೆ ಎಂದು ಹೇಳಿದ್ದೇವೆ. ಅದರ ಮೇಲೆ ಕೊಡಬೇಕಾದರೆ, ಮೀಟಿಂಗ್ ಕರೆದು, ಚರ್ಚೆ ಮಾಡಿ ನಾವು ರೈತರಿಗೆ ಕೊಡಿ ಕೊಡುತ್ತೇವೆ; ಅವರಿಗೆ ನಾವು ಎಲ್ಲಾ ಅನುಕೂಲ ಮಾಡಿಕೊಡುತ್ತೇವೆ.

ಶ್ರೀ ಹೆಚ್. ಶಿವಪ್ಪ :— 1998-99ನೇ ಸಾಲಿಗೆ ಕೊಟ್ಟಂಥ ಬೆಲೆಯನ್ನು ಮುಂದುವರೆಸಬೇಕು ಎಂದು ಈಗಾಗಲೇ ಸೂಚನೆ ಕೊಟ್ಟಿದ್ದೇನೆ ಎಂದ ಮೇಲೆ ಆ ಸಮಸ್ಯೆ ಇಲ್ಲಿಗೆ ಪರಿಹಾರವಾಯಿತು.

ಶ್ರೀ ಕೆ. ಪುಟ್ಟಣ್ಣಯ್ಯ :— 880 ರೂಪಾಯಿಗಳ ಬಗ್ಗೆ ಚರ್ಚೆ ಮಾಡಿ.

ಶ್ರೀ ಕೆ.ಎನ್. ನಾಗೇಗೌಡ :— ಈ ವಾರದಲ್ಲಿ ಮೀಟಿಂಗ್ ಕರೆದು 880 ರೂಪಾಯಿಗಳನ್ನು ಮಂಡ್ಯ ಶುಗರ್ ಫ್ಯಾಕ್ಟರಿ ಮತ್ತು ಚಾಮುಂಡೇಶ್ವರಿ ಫ್ಯಾಕ್ಟರಿಯಿಂದ ಕೊಡಿಸಿ ಕೊಡುತ್ತೇವೆ. ಅದರಲ್ಲಿ ಏನೂ ತೊಂದರೆಯಿಲ್ಲ.

(ಓ) ಬಗರ್ ಹುಕುಂ ಸಾಗುವಳಿ ಬಗ್ಗೆ.

ಶ್ರೀ ಶಿವಾನಂದ ನಾಯಕ್ (ಭಟ್ಕಳ) :— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಅಧಿಕಾರಿಗಳಿಗೆ ಮೆಸೇಜ್ ಕಳುಹಿಸಿದ್ದೇವೆ ಎಂದು ಇವರು ಹೇಳಿದರು. ಈಗ ಅಲ್ಲಿ ಲಾಟಿ ಚಾರ್ಜ್ ಆಗಿ ನಾಲ್ಕು ಜನ ರೈತರ ತಲೆ ಹೊಡೆದು ಹಾಕಿದ್ದಾರೆ. ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

(ಮಾನ್ಯ ಸದಸ್ಯರು ಸದನದ ಬಾವಿಗೆ ಧರಣಿಗೆ ಬಂದರು)

Mr. SPEAKER :— He is an young man. He should realise.

ಶ್ರೀ ಬಿ.ಎಸ್. ಯಡಿಯೂರಪ್ಪ :— ನಾವು ಏನೊಂದು ತೀರ್ಮಾನ ಮಾಡಿದ್ದೇವೆ ಎಂದರೆ, ಇನ್ನು ನಾಲ್ಕಾರು ದಿವಸಗಳಲ್ಲಿ ಈ ಅಧಿವೇಶನ ಮುಗಿದು ನಾವು ಚುನಾವಣೆಗೆ ಹೋಗುವಂಥ ಸಂದರ್ಭ ಇದೆ. ಅದಕ್ಕಾಗಿ, ಶಾಂತ ರೀತಿಯಲ್ಲಿ ಈ ಸದನದ ಕಾರ್ಯಕಲಾಪಗಳು ಮುಗಿಯಲಿ, ನಾವು ವೆಲ್‌ಗೆ ಹೋಗುವುದು, ಧರಣಿ ಮಾಡುವುದು, ಸತ್ಯಾಗ್ರಹ ಮಾಡುವುದು, ವಾಕ್-ಔಟ್ ಮಾಡುವುದು ಬೇಡ, ಇವುಗಳಿಂದ ಏನೂ ಉಪಯೋಗವಾಗುವುದಿಲ್ಲ. ಎನ್ನುವ ತೀರ್ಮಾನಕ್ಕೆ ಬಂದು ನಾವು ಸಂಯಮದಿಂದ ವರ್ತನೆ ಮಾಡುತ್ತಿದ್ದೇವೆ. ಈಗ ತಾನೇ ತಾವು ತಮ್ಮ ಕನ್ಸರ್ವೇಟರ್ಸ್ ಮೂಲಕ ಡೈರೆಕ್ಷನ್ಸ್ ಕೊಡಿಸಿದಿರಿ. ಮಾನ್ಯ ಯಡಿಯೂರಪ್ಪನವರೇ ತಾವು ಈ ಬಗ್ಗೆ ಮಾತನಾಡುತ್ತೇವೆ ಎಂದು ಅವರು ಹೇಳಿದರು. ಹೋದವಾರ ಇವರಿಬ್ಬರೂ ಸಹ ಇಲ್ಲಿ ಇದನ್ನು ಪ್ರಸ್ತಾಪ ಮಾಡಿದರು. ಇಷ್ಟಾದ ಮೇಲೂ ಸಹ ಈಗ ಅಲ್ಲಿ ನಾಲ್ಕು ಜನ ರೈತರ ತಲೆ ಹೊಡೆದಿದ್ದಾರೆ. ಆ ಫೋಟೋಗಳನ್ನು ಕೂಡ ನಾನು ಮಾನ್ಯ ಸ್ಪೀಕರ್‌ರವರಿಗೆ ಕಳುಹಿಸಿಕೊಟ್ಟಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ ಹತ್ತಾರು ವರ್ಷಗಳಿಂದ ಎಲ್ಲೆಲ್ಲಿ ಜಮೀನು ಸಾಗುವಳಿ ಮಾಡುತ್ತಿದ್ದಾರೆ, ಇಂಥ ಸಂದರ್ಭವನ್ನು ಉಪಯೋಗ ಮಾಡಿಕೊಂಡು ಅರಣ್ಯ ಮಾಡುತ್ತೇವೆ ಎಂದು ಗುಂಡಿಗಳನ್ನು ತೆಗೆದು ರೈತರ ಮಾರಣ ಹೋಮ ಮಾಡಲು ಹೊರಟರೆ ನಾವು ಅದನ್ನು ಟಾಲರೇಟ್ ಮಾಡಿಕೊಂಡು ಇಲ್ಲಿ ಕುಳಿತುಕೊಳ್ಳಬೇಕೇ? ಸ್ವಾಮಿ, ತಾವು ಈ ಬಗ್ಗೆ ವರದಿ ತರಿಸಿಕೊಳ್ಳಿ. ನಾವು ಏನು ಮಾಡಬೇಕು ಎಂದು ತಾವೇ ಹೇಳಿ. ನಮ್ಮ ಜಾಗದಲ್ಲಿ ಇದ್ದರೆ ತಾವು ಏನು ಮಾಡುತ್ತಿದ್ದಿರಿ? ಒಂದು ಕ್ಷಣ ನೀವು ಮಂತ್ರಿಗಳಲ್ಲ ಎಂದು ತಿಳಿದುಕೊಂಡು ಯೋಚನೆ ಮಾಡಿ, ನಿಮ್ಮ ಕ್ಷೇತ್ರದಲ್ಲಿ ಇದು ಆಗದಿದ್ದರೆ ನೀವು ಏನು ಮಾಡುತ್ತಿದ್ದೀರಿ? ಇಲ್ಲಿ ಸದನ ನಡೆಯುತ್ತಿದೆ. ಬೆಳಿಗ್ಗೆಯಿಂದ ಸಂಬಂಧಪಟ್ಟ